# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 1121
ಮಾನ್ಯ ಸದಸ್ಯರ ಹೆಸರು : ಶ್ರೀ ಛಲವಾದಿ ಟಿ ನಾರಾಯಣಸ್ವಾಮಿ (ವಿಧಾನ ಸಭೆಯಿಂದ ಚುನಾಯಿತರಾದವರು)
ಉತ್ತರಿಸುವ ದಿನಾಂಕ : 25.07.2024
ಉತ್ತರಿಸುವ ಸಚಿವರು. : ಗೃಹ ಸಚಿವರು.

<table>
<tr><th>ಕ್ರ.ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>2023 ಮತ್ತು 2024 ಜೂನ್ ಅಂತ್ಯದವರೆಗೆ ರಾಜ್ಯದಲ್ಲಿ ನಡೆದಿರುವ ಕೊಲೆ, ಪೋಕ್ಸೋ, ಅತ್ಯಾಚಾರ, ಹಲ್ಲೆ, ಎನ್.ಡಿ.ಪಿ.ಎಸ್ (ಡ್ರಗ್ಸ್) ಮಹಿಳೆಯರ ಮೇಲಿನ ಲೈಂಗಿಕ ದೌರ್ಜನ್ಯ ಸೈಬರ್ ಅಪರಾಧಗಳು, ವಿವಿಧ ರೀತಿಯ ವಂಚನೆಗಳು ರಾಬರಿಗಳು, ಡಾಕಾಯಿತಿ ದೇಶದ್ರೋಹದ ಪ್ರಕರಣಗಳು, ದೇಶದ್ರೋಹದ ಘೋಷಣೆ ಪ್ರಕರಣಗಳು, ಧರ್ಮಾಧಾರಿತ ಪ್ರಕರಣಗಳು, ಬಾಂಬ್ ಸ್ಫೋಟ ಹಾಗೂ ಇತ್ಯಾದಿ ಅಪರಾಧ ಪ್ರಕರಣಗಳ ಸಂಖ್ಯೆ ಎಷ್ಟು; (ವರ್ಷವಾರು ಸಂಪೂರ್ಣ ಮಾಹಿತಿ ನೀಡುವುದು)</td><td>2023 ಮತ್ತು 2024 ಜೂನ್ ಅಂತ್ಯದವರೆಗಿನ ರಾಜ್ಯದಲ್ಲಿ ನಡೆದಿರುವ ವಿವಿಧ ಪ್ರಕರಣಗಳ ವಿವರಗಳು ಈ ಕೆಳಗಿನಂತಿವೆ.<br><table>
<tr><th>ಕ್ರ.ಸ</th><th>ಪ್ರಕರಣ</th><th>2023ನೇ ಸಾಲಿನ ಪ್ರಕರಣಗಳ ಸಂಖ್ಯೆ</th><th>2024ನೇ ಸಾಲಿನ ಪ್ರಕರಣಗಳ ಸಂಖ್ಯೆ</th></tr>
<tr><td>1</td><td>ಕೊಲೆ ಪ್ರಕರಣ</td><td>1296</td><td>631</td></tr>
<tr><td>2</td><td>ಪೋಕ್ಸೊ ಪ್ರಕರಣ</td><td>3863</td><td>2013</td></tr>
<tr><td>3</td><td>ಅತ್ಯಾಚಾರ ಪ್ರಕರಣ</td><td>607</td><td>331</td></tr>
<tr><td>4</td><td>ಹಲ್ಲೆ ಪ್ರಕರಣ</td><td>17418</td><td>9378</td></tr>
<tr><td>5</td><td>ಎನ್‌ಡಿಪಿಎಸ್ ಪ್ರಕರಣ</td><td>6764</td><td>1708</td></tr>
<tr><td>6</td><td>ಮಹಿಳೆಯರ ಮೇಲಿನ ಲೈಂಗಿಕ ದೌರ್ಜನ್ಯ ಪ್ರಕರಣ</td><td>6493</td><td>3643</td></tr>
<tr><td>7</td><td>ಸೈಬರ್ ಅಪರಾಧಗಳು ಪ್ರಕರಣ</td><td>22245</td><td>11952</td></tr>
<tr><td>8</td><td>ವಂಚನೆ</td><td>6932</td><td>3430</td></tr>
<tr><td>9</td><td>ರಾಬರಿ ಪ್ರಕರಣ</td><td>1883</td><td>1017</td></tr>
<tr><td>10</td><td>ಡಕಾಯಿತಿ ಪ್ರಕರಣ</td><td>315</td><td>86</td></tr>
<tr><td>11</td><td>(153ಎ) ಐಪಿಸಿ ಪ್ರಕರಣಗಳು</td><td>134</td><td>86</td></tr>
<tr><td>12</td><td>ದೇಶ ದ್ರೋಹದ ಪ್ರಕರಣ</td><td>-</td><td>-</td></tr>
<tr><td>13</td><td>ದೇಶ ದ್ರೋಹದ ಘೋಷಣೆ</td><td>-</td><td>-</td></tr>
<tr><td>14</td><td>ಬಾಂಬ್ ಸ್ಫೋಟ</td><td>-</td><td>1</td></tr>
</table></td></tr>
</table>

| | | |
|---|---|---|
| ಆ) | ಅಪರಾಧ ತಡೆಗೆ ಪೊಲೀಸರಿಂದ ಒತ್ತು ನೀಡುವ ಕೆಲಸ ಆಗುತ್ತಿದೆಯೇ ಹೆಚ್ಚಿನ ಬೀಟ್ ವ್ಯವಸ್ಥೆ ಜಾರಿಯಾಗಿದೆಯೇ ಅಪರಾಧಗಳ ಬಗ್ಗೆ ಜನರಲ್ಲಿ ಅರಿವು ಮೂಡಿಸುವ ಕೆಲಸ ಆಗುತ್ತಿದೆಯೇ ಅಪರಾಧ ಪ್ರಕರಣಗಳು ಯಥೇಚ್ಛವಾಗಿ ನಡೆಯುತ್ತಿರುವುದರಿಂದ ಜನಸಾಮಾನ್ಯರಿಗೆ ರಕ್ಷಣೆಯೇ ಇಲ್ಲ ಎಂಬ ಅನುಮಾನ ವ್ಯಕ್ತವಾಗುವುದಿಲ್ಲವೇ ಸಮಾಜಘಾತುಕ ಶಕ್ತಿಗಳ ವಿರುದ್ಧ ಸೂಕ್ತ ಕಾನೂನು ಕ್ರಮ ತೆಗೆದುಕೊಳ್ಳಲಾಗುತ್ತಿದೆಯೇ; (ಸಂಪೂರ್ಣ ಮಾಹಿತಿ ನೀಡುವುದು) | ರಾಜ್ಯದಲ್ಲಿ ನಡೆಯುವ ವಿವಿಧ ಅಪರಾಧಗಳ ತಡೆಗೆ ಪೊಲೀಸ್ ಇಲಾಖೆಯಿಂದ ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ.<br><br>❖ ರಾಜ್ಯದ ಎಲ್ಲಾ ಪೊಲೀಸ್ ಠಾಣೆಗಳ ವ್ಯಾಪ್ತಿಯಲ್ಲಿ ಬೀಟ್ ವ್ಯವಸ್ಥೆ ಜಾರಿಯಲ್ಲಿದ್ದು, ಬೀಟ್ ಸಭೆಗಳನ್ನು ಮಾಡಿ ಅಪರಾಧ ಪ್ರಕರಣಗಳ ಬಗ್ಗೆ ಸಾರ್ವಜನಿಕರಿಗೆ ಅರಿವು ಮೂಡಿಸಲಾಗುತ್ತಿದೆ. ಚಟುವಟಿಕೆಯಲ್ಲಿರುವ ಸಮಾಜಘಾತಕ ವ್ಯಕ್ತಿಗಳ ಮೇಲೆ ಸೂಕ್ತ ಕಾನೂನು ಕ್ರಮ ಕೈಗೊಳ್ಳಲಾಗುತ್ತಿದೆ. ಬೀಟ್ ಸಿಬ್ಬಂದಿಗಳ ಮೇಲುಸ್ತುವಾರಿಯನ್ನು ಪಿ.ಎಸ್.ಐ ಮತ್ತು ಮೇಲ್ಪಟ್ಟದ ಹಿರಿಯ ಅಧಿಕಾರಿಗಳಿಂದ ನಿರ್ವಹಿಸಲಾಗುತ್ತಿದೆ.<br><br>❖ ಅಪರಾಧಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ ಜನರಲ್ಲಿ ಜಾಗೃತಿ ಮೂಡಿಸಲು ಬೀಟ್ ಮಟ್ಟದಲ್ಲಿಯೂ ಕೂಡ ಜನಸಂಪರ್ಕ ಸಭೆಗಳನ್ನು ನಡೆಸಲಾಗುತ್ತಿದೆ.<br><br>❖ ಠಾಣಾ ಸರಹದ್ದಿನಲ್ಲಿ ಸರ ಅಪಹರಣ ಪ್ರಕರಣಗಳು ಹಾಗೂ ಇತರೆ ಕಳ್ಳತನ ಪ್ರಕರಣಗಳು ಜರುಗದಂತೆ ಸೂಕ್ತ ಕ್ರಮಕೈಗೊಂಡು ಆಯಾಕಟ್ಟಿನ ಸ್ಥಳಗಳಲ್ಲಿ ಪೆಟ್ರೋಲಿಂಗ್ ಪಾಯಿಂಟ್‌ಗಳನ್ನು ನೇಮಕ ಮಾಡಲಾಗಿದೆ.<br><br>❖ ವಿವಿಧ ರೀತಿಯ ಪ್ರಕರಣಗಳು ಜರುಗದಂತೆ ಜನಸ್ನೇಹಿ ಪಾಯಿಂಟ್‌ಗಳನ್ನು ಗುರುತಿಸಿ ಸಿಬ್ಬಂದಿಗಳನ್ನು ನೇಮಕ ಮಾಡಲಾಗಿದೆ.<br><br>❖ ಸರ ಅಪಹರಣ ಪ್ರಕರಣಗಳು ಹಾಗೂ ಇತರೆ ಕಳ್ಳತನ ಪ್ರಕರಣಗಳು ಜರುಗದಂತೆ ಹಗಲು ಮತ್ತು ರಾತ್ರಿ ವೇಳೆ ಬೀಟ್ ಸಿಬ್ಬಂದಿಗಳಿಗೆ ಸೂಕ್ತ ತಿಳುವಳಿಕೆ ನೀಡಿ ಪರಿಣಾಮಕಾರಿಯಾಗಿ ಗಸ್ತು ಹೆಚ್ಚಿಸಲಾಗಿರುತ್ತದೆ.<br><br>❖ ಕಳ್ಳತನ ಪ್ರಕರಣಗಳಲ್ಲಿನ ಎಂ.ಓ. (ಪದೇ ಪದೇ ಕಳ್ಳತನ ಮಾಡುವ) ಆಸಾಮಿಗಳ ಬಗ್ಗೆ ಹಾಗೂ ಅಂತಹವರುಗಳ ಚಟುವಟಿಕೆಗಳ ಬಗ್ಗೆ ಸೂಕ್ತ ನಿಗಾವಣೆ ಇಡಲಾಗಿರುತ್ತದೆ.<br><br>❖ ಜೈಲಿನಿಂದ ಬಿಡುಗಡೆಯಾಗುವಂತಹ ಎಂ.ಓ. ಆಸಾಮಿಗಳ ಪತ್ತೆ ಬಗ್ಗೆ ಅಪರಾಧ ವಿಭಾಗದ ಸಿಬ್ಬಂದಿಗಳನ್ನು ನೇಮಕ ಮಾಡಲಾಗಿರುತ್ತದೆ.<br><br>❖ ಠಾಣಾ ಸರಹದ್ದಿನಲ್ಲಿ ಹೊಯ್ಸಳ ಮತ್ತು ಚೀತಾಗಳನ್ನು ಆಯಕಟ್ಟಿನ ಸ್ಥಳಗಳಲ್ಲಿ ಗಸ್ತು ನಡೆಸುವಂತೆ ನೇಮಿಸಲಾಗಿರುತ್ತದೆ.<br><br>❖ ಅನುಮಾನಾಸ್ಪದವಾಗಿ ಚಲಿಸುವಂತಹ |

| | | |
|---|---|---|
| | | ದ್ವಿಚಕ್ರವಾಹನಗಳ ಬಗ್ಗೆ ನಿಗಾ ಇಡಲಾಗಿದ್ದು, ಅಂತಹ ವಾಹನಗಳನ್ನು ಚೆಕ್ ಮಾಡಲಾಗುತ್ತಿರುತ್ತದೆ.<br>❖ ಆಯಕಟ್ಟಿನ ಪ್ರದೇಶಗಳಲ್ಲಿ ಸಿ.ಸಿ.ಟಿ.ವಿ ಕ್ಯಾಮೆರಾಗಳನ್ನು ಅಳವಡಿಸಿ ಕ್ರಮ ಕೈಗೊಳ್ಳಲಾಗಿದೆ.<br>❖ ಸಾರ್ವಜನಿಕರಿಗೆ ಆಗಾಗ್ಗೆ ಇಂತಹ ಅಪರಾಧ ಕೃತ್ಯಗಳ ಬಗ್ಗೆ ಅರಿವು ಮೂಡಿಸಿ ಜಾಗೃತಗೊಳಿಸಲಾಗುತ್ತಿದೆ.<br>❖ ಸಾಮಾಜಿಕ ಜಾಲತಾಣಗಳು ಹಾಗೂ ವಿದ್ಯುನ್ಮಾನ ಮಾಧ್ಯಮ ಮತ್ತು ಪತ್ರಿಕೆ ಮಾಧ್ಯಮಗಳ ಮೂಲಕ ಅಪರಾಧ ಕೃತ್ಯಗಳ ಬಗ್ಗೆ ಜಾಗೃತಿ ಮೂಡಿಸಲಾಗುತ್ತಿದೆ.<br>❖ ಪ್ರತಿ ತಿಂಗಳು 'ನೊಂದವರ ದಿನಾಚರಣೆ' ಯನ್ನು ನಡೆಸಿ, ಕುಂದು ಕೊರತೆಗಳನ್ನು ಆಲಿಸಿ, ಸೂಕ್ತ ಕ್ರಮಕೈಗೊಳ್ಳಲಾಗುತ್ತಿದೆ.<br>❖ ಪರಿಶಿಷ್ಟ ಜಾತಿ/ಪಂಗಡದವರ ಮೇಲೆ ನಡೆಯುವ ದೌರ್ಜನ್ಯ ಪ್ರಕರಣಗಳನ್ನು ತಡೆಯಲು ಪ್ರತಿ ತಿಂಗಳು ಎಸ್‌ಸಿ/ಎಸ್‌ಟಿ ಸಭೆಗಳನ್ನು ಆಯೋಜಿಸಲಾಗಿರುತ್ತದೆ.<br>❖ ಸಮಾಜದಲ್ಲಿ ಅಶಾಂತಿ ತರುವ ವ್ಯಕ್ತಿಗಳ ವಿರುದ್ಧ ಪಿಎಆರ್ ದಾಖಲಿಸಿ ಬಾಂಡ್ ಬರೆಯಿಸಿಕೊಂಡು, ಗಡಿಪಾರು ಮಾಡಲು ಸೂಕ್ತ ಕ್ರಮ ಕೈಗೊಳ್ಳಲಾಗುತ್ತಿರುತ್ತದೆ. |
| ಇ) | ಸಾಲು ಸಾಲು ಅಪರಾಧ ಪ್ರಕರಣಗಳು ವರದಿಯಾಗುತ್ತಿದ್ದು ಸಮಾಜಘಾತುಕ ಶಕ್ತಿಗಳು ಮತ್ತು ಧರ್ಮಾಧಾರಿತ ಪ್ರಕರಣಗಳು ಯಥೇಚ್ಛವಾಗಿ ಬೆಳಕಿಗೆ ಬರುತ್ತಿದ್ದು, ಸಾರ್ವಜನಿಕರಲ್ಲಿ ಒಂದು ರೀತಿಯ ಆತಂಕದ ವಾತಾವರಣ ಸೃಷ್ಟಿಯಾಗಿ ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಹಾಳಾದಂತಾಗಿರುವುದಿಲ್ಲವೇ ಲಾ ಅಂಡ್ ಆರ್ಡರ್ ಪೂರ್ಣ ಪ್ರಮಾಣದಲ್ಲಿ ಕೈತಪ್ಪಿ ಹೋದಂತಾಗುವುದಿಲ್ಲವೇ:<br>(ಸಂಪೂರ್ಣ ಮಾಹಿತಿ ನೀಡುವುದು) | ಸಾಲು ಸಾಲು ಅಪರಾಧ ಪ್ರಕರಣಗಳ ಕುರಿತು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ.<br>❖ ಸಮಾಜಘಾತುಕ ಶಕ್ತಿಗಳ ಮೇಲೆ ನಿಗಾ ವಹಿಸಿದ್ದು, ಅಂತಹವರು ಕಂಡುಬಂದಲ್ಲಿ ಸೂಕ್ತ ಕಾನೂನು ಕ್ರಮ ಕೈಗೊಳ್ಳಲಾಗುತ್ತಿದೆ.<br>❖ ಶಾಂತಿ ಕದಡುವವರ ವಿರುದ್ಧ ಯಾವುದೇ ಮುಲಾಜಿಲ್ಲದೇ ಸೂಕ್ತ ಕಾನೂನು ಪ್ರಕಾರವಾಗಿ ಕಟ್ಟುನಿಟ್ಟಾಗಿ ಕ್ರಮ ಜರುಗಿಸಲಾಗುತ್ತಿದೆ.<br>❖ ಜಿಲ್ಲಾ ಅಥವಾ ಠಾಣಾ ಮಟ್ಟದಲ್ಲಿ 'ಸಾಮಾಜಿಕ ಜಾಲತಾಣ ನಿಗಾ ಘಟಕ' ಸ್ಥಾಪಿಸಿ ಸುಳ್ಳು ಸುದ್ದಿ ಹರುಡುವವರ ಮೇಲೆ ನಿಗಾವಹಿಸಲಾಗುತ್ತಿದೆ.<br>❖ ಸಾಮಾಜಿಕ ಜಾಲತಾಣಗಳಲ್ಲಿ ಸುಳ್ಳು ಸುದ್ದಿ ಹರಡಿ, ಸಮಾಜದ ಸ್ವಾಸ್ಥ್ಯ ಹಾಳು ಮಾಡುವ ವ್ಯಕ್ತಿಗಳ ವಿರುದ್ಧ ನಿರ್ದಾಕ್ಷಣ್ಯವಾಗಿ ಕಾನೂನು ಕ್ರಮ ಕೈಗೊಳ್ಳಲಾಗುತ್ತಿದೆ. |

| | | |
|---|---|---|
| | | ❖ ಕಾಲ-ಕಾಲಕ್ಕೆ ಎಲ್ಲಾ ಧರ್ಮದ ಮುಖಂಡರೊಂದಿಗೆ ಶಾಂತಿ ಸಭೆಗಳನ್ನು ಆಯೋಜಿಸಿ, ಶಾಂತಿ ಸುವ್ಯವಸ್ಥೆಯನ್ನು ಕಾಪಾಡಲು, ಸಾಕಷ್ಟು ಸಲಹೆ ಸೂಚನೆಗಳನ್ನು ನೀಡಲಾಗುತ್ತಿದೆ.<br>❖ ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಹಾಳಾಗದಂತೆ ಪೂರ್ಣ ಪ್ರಮಾಣದಲ್ಲಿ ಮುಂಜಾಗ್ರತ ಕ್ರಮವಹಿಸಿ ಕಟ್ಟುನಿಟ್ಟಿನ ಕ್ರಮಕೈಗೊಳ್ಳಲಾಗುತ್ತಿದೆ. |
| ಈ) | ರಾಜ್ಯದಲ್ಲಿ ವಿವಿಧ ಸಂಘಟನೆಗಳ ವಿರುದ್ಧ ದಾಖಲಾದ ಪ್ರಕರಣಗಳೆಷ್ಟು; ಸಂಘಟನೆಗಳ ವಿರುದ್ಧ ಇಲ್ಲಿಯವರೆಗೆ ದಾಖಲಾದ ಪ್ರಕರಣಗಳನ್ನು 2023-24ನೇ ವರ್ಷದಲ್ಲಿ ಕೈಬಿಡುವುದು/ ಹಿಂಪಡೆಯಲಾಗಿದೆಯೇ; ಒಂದು ವೇಳೆ ಕೈಬಿಟ್ಟರೆ/ಹಿಂಪಡೆದಿದ್ದಲ್ಲಿ ಎಷ್ಟು ಪ್ರಕರಣಗಳು ಮತ್ತು ಯಾವ ಯಾವ ಸಂಘಟನೆಗಳ ಪ್ರಕರಣಗಳನ್ನು ಕೈಬಿಡಲಾಗಿದೆ/ ಹಿಂಪಡೆಯಲಾಗಿದೆ? (ಮಾಹಿತಿ ನೀಡುವುದು) | ❖ ರಾಜ್ಯದಲ್ಲಿ ವಿವಿಧ ಸಂಘಟನೆಗಳ ವಿರುದ್ಧ ಒಟ್ಟು 30 ಪ್ರಕರಣಗಳು ದಾಖಲಾಗಿರುತ್ತದೆ.<br>❖ 2023-24ನೇ ವರ್ಷದಲ್ಲಿ ಯಾವುದೇ ಸಂಘಟನೆಗಳ ವಿರುದ್ಧ ಇಲ್ಲಿಯವರೆಗೆ ಪ್ರಕರಣಗಳನ್ನು ಹಿಂಪಡೆಯಲಾಗಿರುವುದಿಲ್ಲ. |

ಸಂಖ್ಯೆ: 42 ಎಸ್‌ಡಿಎನ್ 2024

(ಡಾ: ಜಿ.ಪರಮೇಶ್ವರ)
ಗೃಹ ಸಚಿವರು